# ಪತ್ರಿಕಾ ಪ್ರಕಟಣೆ – ಮೇ 30, ಬೆಂಗಳೂರು

## ಅಮೃತಮಹಲ್ ಕಾವಲು ಹಿತರಕ್ಷಣಾ ಸಮಿತಿ

**ಐಐಎಸ್‌ಸಿ, ಡಿಆರ್‌ಡಿಓ, ಬಾರ್ಕ್ ಹಾಗೂ ಇತರ ಅನೇಕ ಕೇಂದ್ರೀಯ ಸಂಸ್ಥೆಗಳು ಕಾನೂನು–ಬಾಹಿರವಾಗಿ ಅಮೃತಮಹಲ್ ಕಾವಲುಗಳನ್ನು ವಶಕ್ಕೆ ಪಡೆದುಕೊಳ್ಳುವುದಕ್ಕೆ ಸಾರ್ವಜನಿಕ ಅಹವಾಲುಗಳಲ್ಲಿ ಸಂಪೂರ್ಣ ವಿರೋಧ ವ್ಯಕ್ತವಾಗಿರುವ ಬಗ್ಗೆ**

- ಕಾವಲುಗಳ ಮೇಲೆ 60 ಗ್ರಾಮಗಳ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅವಲಂಬನೆಯ ವಿಸ್ತೃತ ಶ್ರೇಣಿಯ ಸಾಕ್ಷಿಗಳನ್ನು ಸಾರ್ವಜನಿಕ ಅಹವಾಲುಗಳು ಹೊರತಂದಿವೆ
- ತಮ್ಮ ಹುಲ್ಲುಗಾವಲುಗಳನ್ನು ತಮ್ಮಿಂದ ಮುಂಗಡವಾಗಿ ಅನುಮತಿ ಪಡೆಯದೆ ವಶಕ್ಕೆ ತೆಗೆದುಕೊಂಡಿರುವುದನ್ನು ನಿವಾಸಿಗಳು ಖಂಡಿಸುತ್ತಾರೆ
- ಜಾನುವಾರುಗಳ ಒತ್ತಡದ ಮಾರಾಟ ಹಾಗೂ ವಲಸೆ ಪ್ರಕ್ರಿಯೆಯನ್ನು, ಕಾವಲುಗಳ ಬಳಕೆಯ ಮೇಲೆ ಹೇರಿರುವ ನಿರ್ಬಂಧವು ಸೃಷ್ಟಿಸಿದೆ
- ಜೀವನೋಪಾಯಗಳ ಹಾಗೂ ಬುಡಕಟ್ಟು ಸಂಸ್ಕೃತಿಯ ಅಪಾರವಾದ ಹಾನಿಯಾಗುವ ಭೀತಿಯಿದೆ
- ಕಾವಲುಗಳಲ್ಲಿ ಯುರೇನಿಯಂ ಎನ್‌ರಿಚ್‌ಮೆಂಟ್ ಸ್ಥಾವರಗಳ ಸ್ಥಾಪನೆಯ ಯೋಜನೆಗಳನ್ನು ಕುರಿತಾಗಿ ಆಕ್ರೋಶ ಹಾಗೂ ಭೀತಿ
- ಗ್ರಾಮ ಪಂಚಾಯತಿ ಸದಸ್ಯರು, ತಾಲ್ಲೂಕು ಪಂಚಾಯತಿ ಸದಸ್ಯರೂ ಸೇರಿದಂತೆ ಚುನಾಯಿತ ಪ್ರತಿನಿಧಿಗಳು ಕಾವಲುಗಳ ಪುನಃಶ್ಚೇತನದ ಆಗ್ರಹ ಮಾಡಿದ್ದಾರೆ; ಕಾವಲುಗಳ ಪುನಃಶ್ಚೇತನದ ಜನಗಳ ಬೇಡಿಕೆಗೆ ಮೊಳಕಾಲ್ಮೂರು ಎಮ್‌ಎಲ್‌ಎಯವರು ಬೆಂಬಲ ನೀಡಿದ್ದಾರೆ

ಲಿಯೋ ಎಫ್ ಸಾಲ್ಡಾನ ಹಾಗೂ ಎನ್‌ವೈರನ್‌ಮೆಂಟ್ ಸಪೋರ್ಟ್ ಗ್ರೂಪ್‌ರವರು (ವಿವರಗಳನ್ನು ಇಲ್ಲಿ ನೋಡಿ: : http://tinyurl.com/qhxh8p3) ಸಲ್ಲಿಸಿದ ಅರ್ಜಿಗಳಿಗೆ ಸಂಬಂಧಿಸಿದ ಮಾರ್ಚ್ 21, 2013ರ ಗೌರವಾನ್ವಿತ ರಾಷ್ಟ್ರೀಯ ಹಸಿರು ಪೀಟದ ಆದೇಶದ ಅನುಸರಣೆಗೆ ಸಂಬಂಧಿಸಿದಂತೆ, ಡಾ. ಎಸ್. ರವಿಚಂದ್ರ ರೆಡ್ಡಿ ಹಾಗೂ ಡಾ. ಕೆ.ವಿ. ಅನಂತರಾಮ್‌ರನ್ನು ಒಳಗೊಂಡ ತಜ್ಞ ಸಮಿತಿಯು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿರುವ ಅಮೃತಮಹಲ್ ಕಾವಲುಗಳಿಗೆ ಭೇಟಿ ನೀಡಿದರು; ಪಾರಿಸಾರಿಕವಾಗಿ ಸೂಕ್ಷ್ಮವಾದ ಹುಲ್ಲುಗಾವಲು ಪರಿಸರ ವ್ಯವಸ್ಥೆಗಳನ್ನು ಹಲವಾರು ಪ್ರಸ್ತಾಪಿತ ಯೋಜನೆಗಳಿಗೆ ಬಳಕೆ ಮಾಡುವುದರ ಒಟ್ಟಾರೆ ಪರಿಣಾಮವನ್ನು ಕುರಿತಾಗಿ ಸ್ಥಳೀಯ ಸಮುದಾಯಗಳೊಂದಿಗೆ ಭೇಟಿಯ ಸಮಯದಲ್ಲಿ ಚರ್ಚೆ ಮಾಡಿದರು. ಮೇ 23ರಂದು ನಡೆಸಿದ ಸ್ಥಳ ಪರೀಕ್ಷಣೆಯ ಸಮಯದಲ್ಲಿ, ಸಮಿತಿಯು ಕಾವಲುಗಳನ್ನೂ ಹಾಗೂ ಕೆಲವು ಪ್ರಭಾವಿತ ಗ್ರಾಮಗಳ ಭೇಟಿಯನ್ನೂ ಮಾದಿದರು. ಸ್ಥಾನಿಕ ಪರೀಕ್ಷಣೆಯ ಸಮಯದಲ್ಲಿ, ಕೃಷ್ಣಮೃಗದಂತಹ ಪ್ರಾಣಿಗಳ ಸ್ಪಷ್ಟ ಸಾಕ್ಷಿಯನ್ನು ಕಂಡರು. ಆ ಪ್ರದೇಶವು ಜೀವವೈವಿಧ್ಯತೆ ಹಾಗೂ ವನ್ಯಮೃಗಗಳಿಂದ ಶ್ರೀಮಂತವಾಗಿರುವುದು ಇದರಿಂದ ಸ್ಪಷ್ಟವಾಗಿ ತಿಳಿಯಿತು. ಕೆಲವೇ ಗಂಟೆಗಳಲ್ಲಿ, ಆ ಸ್ಥಳಗಳಲ್ಲಿ ಸಾವಿರಾರು ಮೇಕೆ, ಕುರಿಗಳು ಹಾಗೂ ಜಾನುವಾರುಗಳು ಹುಲ್ಲು ಮೇಯುತ್ತಿರುವುದನ್ನು ಕಂಡರು. ನೇಯ್ಗೆಯವರು, ಕುರಿ/ದನ ಕಾಯುವವರು, ರೈತರುಗಳೊಂದಿಗೆ ಸಮಿತಿಯ ಸದಸ್ಯರು ಒಡನಾಡಿ, ಕಾವಲುಗಳ ಬಳಕೆಯ ನಿಷೇಧದಿಂದ ಅವರಿಗೆ ಒದಗಿರುವ ಅನಾನುಕೂಲತೆಗಳನ್ನು ಕಣ್ಣಾರೆ ಕಂಡರು.

ತದನಂತರ, 24 ಹಾಗೂ 25 ಮೇರಂದು ಐದು ಸಾರ್ವಜನಿಕ ಅಹವಾಲುಗಳನ್ನು ನಡೆಸಲಾಯಿತು. ಅಹವಾಲುಗಳನ್ನು ನಾಲ್ಕು ಗ್ರಾಮಗಳಲ್ಲಿ ನಡೆಸಿದ್ದು, ಪ್ರತಿಯೊಂದು ಗ್ರಾಮಕ್ಕೂ ಸಮಿತಿಯು ಹೋಗಲು ಸಾಧ್ಯವಾಗದಿದ್ದರಿಂದ, ಸುತ್ತಮುತ್ತಲಿನ ಗ್ರಾಮದ ಜನರನ್ನೂ ಅಹವಾಲು ನಡೆಯುವ ಸ್ಥಳಕ್ಕೆ ಬರುವಂತೆ ಹೇಳಲಾಯಿತು. ಗ್ರಾಮ ಪಂಚಾಯತಿ ಸದಸ್ಯರು, ಮಾಜಿ ಗ್ರಾಮ ಪಂಚಾಯತಿ

ಅಧ್ಯಕ್ಷರು, ತಾಲ್ಲೂಕು ಪಂಚಾಯತಿ ಸದಸ್ಯರು, ಜಿಲ್ಲಾ ಪಂಚಾಯತಿ ಸದಸ್ಯರು, ಮಹಿಳೆಯರು, ಪುರುಷರು ಹಾಗೂ ಹಲವಾರು ಜಾತಿ ಹಾಗೂ ಬುಡಕಟ್ಟುಗಳ ಜನರು, ಹಿರಿಯರು ಹಾಗೂ ಕಿರಿಯರು ಹಲವಾರು ಅಹವಾಲುಗಳಲ್ಲಿ ಮಾತನಾಡಿದರು.

ಕಾವಲುಗಳನ್ನು ಬಿಟ್ಟುಕೊಡುವ ಒಂದೇ ಒಂದು ಧ್ವನಿಯೂ ಅಲ್ಲಿ ನೆರೆದಿದ್ದ ಯಾರಿಂದಲೂ ಬರಲಿಲ್ಲ.

**ಪ್ರದೇಶದ ಸ್ಥಳೀಯ ಆರ್ಥಿಕ ಅಭಿವೃದ್ಧಿಗೆ ಹಾಗು ಬುಡಕಟ್ಟು ಸಂಸ್ಕೃತಿಗೆ ಕಾವಲುಗಳು ಮುಖ್ಯ ಪಾತ್ರ ವಹಿಸುತ್ತವೆ**

ಭೂಹಿಡುವಳಿಗಳು(land holding) ಸಣ್ಣ ಪ್ರಮಾಣದಲ್ಲಿರುವ ಈ ಒಣಪ್ರದೇಶವಾದ ಈ ಜಿಲ್ಲೆಯಲ್ಲಿ, ಜಾನುವಾರು ಪಾಲನೆಯ ಮೇಲೆ ಬಹಳಷ್ಟು ಅವಲಂಬಿತವಾಗಿರುವುದನ್ನು ಕುರಿತಾಗಿ ಮಾತನಾಡಿದ ಒಬ್ಬೊಬ್ಬರೂ ಹೇಳಿದರು. ಮಾತನಾಡಿದ ಪ್ರತಿಯೊಬ್ಬರೂ, ಈ ಗ್ರಾಮಗಳಲ್ಲಿನ ಪ್ರತಿಯೊಂದು ಕುಟುಂಬದಲ್ಲೂ ಕನಿಷ್ಠ ಕೆಲವು ಜಾನುವಾರುಗಳನ್ನಾದರೂ ಜೀವನೋಪಾಯಕ್ಕಾಗಿ ಪಾಲನೆ ಮಾಡುತ್ತಿರುವುದನ್ನು ಕುರಿತಾಗಿಯೂ, ಮೇಯಿಸುವ ಸ್ಥಳವಿಲ್ಲದೆ ಇದ್ದರೆ, ತಮ್ಮ ಜಾನುವಾರುಗಳನ್ನು ಮಾರಬೇಕಾದ ಅನಿವಾರ್ಯತೆ ಒದಗುವುದನ್ನು ಕುರಿತಾಗಿಯೂ ಮಾತನಾಡಿದರು. ಅನೇಕ ಜನರು 30–40 ಕುರಿ ಹಾಗೂ ಮೇಕೆಗಳನ್ನೂ ಹಾಗೂ 5 ದನಕರುಗಳನ್ನು ಹೊಂದಿದ್ದಾರೆ ಹಾಗೂ, ಅವುಗಳಿಗೆ ಹುಲ್ಲನ್ನು ಕೊಳ್ಳುವುದು ಅಸಾಧ್ಯದ ಮಾತೆಂದೂ, ಹಾಗೂ ಕಾವಲುಗಳಲ್ಲಿ ಹುಲ್ಲು ಮೇಯಿಸುವುದೊಂದೇ ಅವರಿಗಿರುವ ಮಾರ್ಗವೆಂದೂ ಅವರು ಹೇಳಿದರು. ದೊಡ್ಡ ಉಲ್ಲರತಿಯ ಓಂಕಾರಪ್ಪನು, ತಾನು ಕೇವಲ 8ನೆಯ ತರಗತಿಯವರೆಗೆ ಓದಿರುವುದಾಗಿಯೂ, ಜೀವನಕ್ಕಾಗಿ ಕುರಿ ಸಾಕಣೆಯ ಮೇಲೆ ತಾನು ಸಂಪೂರ್ಣವಾಗಿಅವಲಂಬಿತವಾಗಿರುವುದಾಗಿಯೂ ತಿಳಿಸಿದನು. ತನ್ನ ಭೂಹಿಡುವಳಿಯು ಚಿಕ್ಕದಾಗಿದ್ದು, ಅದರಲ್ಲಿ ನೀರಾವರಿ ಸೌಲಭ್ಯಗಳಿಲ್ಲದ ಕಾರಣ, ಇಡೀ ವರ್ಷದ ತನ್ನ ಜೀವನಕ್ಕಾಗಿ ಕೃಷಿಯ ಮೇಲೆ ಅವಲಂಬಿತವಾಗಲು ಸಾಧ್ಯವಿಲ್ಲವೆಂದು ಹೇಳಿದನು. ಕುರಿ ಸಾಕಣೆಯ ಮೇಲೆ, ತನ್ನಂತೆಯೇ ಸಂಪೂರ್ಣವಾಗಿ ಅವಲಂಬಿತವಾಗಿರುವ ಅನೇಕ ಯುವ ಪೋಷಕರು ಇರುವುದಾಗಿಯೂ ಅವನು ತಿಳಿಸಿದನು.

ನಾಯಕನಹಟ್ಟಿಯಲ್ಲಿ ನಡೆಸಿದ ಅಹವಾಲಿನಲ್ಲಿ ಪ್ರಾಣಿಗಳಿಗೆ ಮೇವು ದೊರೆಯುವುದರ ಮೇಲೆ ಕಠಿಣ ಪರಿಣಾಮ ಬೀರುವುದುರ ಸತ್ಯಾಂಶವನ್ನು ಸಮಿತಿಯವರೂ ಒಪ್ಪಿಕೊಂಡರು ಹಾಗೂ, ಜಾನುವಾರು ಪಾಲನೆಯ ಮೇಲೆ ಈ ತಡೆಯು ಆಗುವ ತೀವ್ರ ಪ್ರಭಾವದ ಬಗ್ಗೆ ಅವರಿಗೆ ಮನನವಾಗಿರುವುದನ್ನೂ ಅಂಗೀಕರಿಸಿದರು. ಬೇಸಿಗೆಯ ತಿಂಗಳುಗಳಲ್ಲಿ ಹಾಗೂ ಬರ ಬಂದಾಗಲೂ ಕಾವಲುಗಳು ಜನರಿಗೆ ಉಪಯುಕ್ತವಾಗಿ ಇರುತ್ತವೆ. ಒಣ ಬೇಸಿಗೆಯಲ್ಲೂ, ಕುರಿಗಳು ಒಣಗಿದ ಹುಲ್ಲು ಹಾಗೂ ಇತರ ಸಣ್ಣ ಗಿಡಗಳು ಮತ್ತು ಪೊದೆಗಳನ್ನು ಮೇಯುವ ವಿಷಯವನ್ನು ಜನರು ಹಂಚಿಕೊಂಡರು.

ಕಾವಲುಗಳಲ್ಲಿ ಮೇಯುವ ಕುರಿಗಳ ಸುತ್ತ ಸಂಪೂರ್ಣ ಆರ್ಥಿಕ ವ್ಯವಸ್ಥೆಯೇ ಇರುವುದನ್ನೂ ಅಹವಾಲಿನಲ್ಲಿ ಹೊರತರಲಾಯಿತು. ಚೆನ್ನಿಗಾನಹಳ್ಳಿಯ ತಿಮ್ಮಾ ರೆಡ್ಡಿಯು, ಕುರಿಗಳ ಉಣ್ಣೆಯನ್ನು ದಾವಣಗೆರೆ ಹಾಗೂ ಶಿವಮೊಗ್ಗದಂತಹ ದೂರದ ಪ್ರದೇಶಗಳಿಂದಲೂ ಬರುವ ಖರೀದಿದಾದರಿಗೆ ಮಾರಾಟ ಮಾಡುವುದು, ಹಾಗೂ ಕುರಿ ಮಾಂಸವನ್ನು ಚಿತ್ರದುರ್ಗ ಹಾಗೂ ಚಳ್ಳಕೆರೆಯಲ್ಲಿ ಮಾರಾಟ ಮಾಡುವುದನ್ನು ಕುರಿತಾಗಿ ತಿಳಿಸಿದರು. ಸುಪ್ರಸಿದ್ಧವಾದ ಚಳ್ಳಕೆರೆ ಕಂಬಳಿಯನ್ನು ಮಾಡಲು ಕುರಿಗಳನ್ನು ಉಣ್ಣೆಯನ್ನು ಬಳಸಲಾಗುತ್ತದೆ ಹಾಗೂ ಸಾವಿರಾರು ಕುರುಬರ ಕುಟುಂಬಗಳು ಜೀವನೋಪಾಯಕ್ಕಾಗಿ ಇದರ ಮೇಲೆ ಅವಲಂಬಿತವಾಗಿವೆ.

ನಾಯಕನ ಹಟ್ಟಿಯ ಗ್ರಾಮ ಪಂಚಾಯತಿ ಸದಸ್ಯರು, ತಮ್ಮ ಹೋಬ್ಳಿಯಲ್ಲಿ, ಸಾವಿರಾರು ಮಹಿಳೆಯರು ಕಾವಲೆ ಹಣ್ಣು ಹಾಗೂ ಕಾರೆ ಹಣ್ಣು ಸಂಗ್ರಹಣೆ ಮಾಡಿ, ಜೀವನ ಸಾಗಿಸುವ ವಿಷಯವನ್ನು ಹೇಳಿದರು. ಕಾವಲುಗಳಿಂದ ಕಟ್ಟಿಗೆಯನ್ನು ಸಂಗ್ರಹಣೆ ಮಾಡಿ, ಮಾರುವ ಹಾಗೂ ಇತರ ಕಿರು ಉತ್ಪನ್ನಗಳನ್ನು ಸಂಗ್ರಹಿಸಿ ಜೀವನ ಮಾಡುವ ತಮ್ಮ ಹಲವಾರು ಕುಟುಂಬಗಳ ಬಗ್ಗೆ ದಲಿತ ಸಮುದಾಯದ ಸದಸ್ಯರು ತಿಳಿಸಿದರು. ಲಂಬಾಣಿ ಸಮುದಾಯದವರೂ ತಮ್ಮ ಜೀವನೋಪಾಯಕ್ಕಾಗಿ ಕಾವಲುಗಳ ಮೇಲೆ ಅವಲಂಬಿತವಾಗಿದ್ದಾರೆ. ಈಚಲು ಮರದಿಂದ ಬುಟ್ಟಿಗಳನ್ನೂ ಹಾಗೂ ಇತರ ಉತ್ಪನ್ನಗಳನ್ನೂ ಮಾಡುವ ವಿಷಯವನ್ನು ಅವರು ತಿಳಿಸಿದರು. ದೊಡ್ಡ

ಉಲ್ಲರ್ತಿಯ ಸಾರ್ವಜನಿಕ ಅಹವಾಲಿನ ಸಮಯದಲ್ಲಿ, ಕಾವಲುಗಳಿಂದ ಸಂಗ್ರಹಿಸಿದ ತಾಜಾ ಔಷಧೀಯ ಸಸ್ಯಗಳನ್ನು ತಂದು, ಸಮಿತಿಯ ಮುಂದೆ ತೋರಿಸಿದರು. ತಮ್ಮ ಆರೋಗ್ಯ ಸಮಸ್ಯೆಗಳಲ್ಲದೆ, ಜಾನುವಾರುಗಳ ಆರೋಗ್ಯ ಸಮಸ್ಯೆಗಳಿಗೂ ಹಲವಾರು ವಿಧದ ಔಷಧೀಯ ಸಸ್ಯಗಳನ್ನು ಬಳಸುವ ರೀತಿಯನ್ನು ಅವರು ಹಂಚಿಕೊಂಡರು.

ಈ ಕಾವಲುಗಳ ಒಳಗೆ ಇರುವ ತಮ್ಮ ಪವಿತ್ರ ದೇವಾಲಯವಾದ ಬೋರೇಗೌಡನ ಗುಡಿಗೆ ಲಭ್ಯತೆ ಈಗ ಇಲ್ಲದಿರುವುದರ ಬಗ್ಗೆ ಯಾದಾಳ ಗಟ್ಟೆಯ ರಾಮಣ್ಣ, ತನ್ನ ಹಾಗೂ ತನ್ನ ಸುತ್ತಮುತ್ತಿಲಿನ ಗ್ರಾಮದವರಿಗೆ ಇರುವ ಅಕ್ರೋಶವನ್ನು ವ್ಯಕ್ತಪಡಿಸಿದರು. ಮೊದಲು ಕಾವಲುಗಳಲ್ಲಿ ತಮ್ಮ ಹಬ್ಬಗಳನ್ನು ಆಚರಣೆ ಮಾಡುತ್ತಿದ್ದು, ಈಗ ಮಾಡಲು ಸಾಧ್ಯವಿಲ್ಲದಿರುವುದರ ಬಗ್ಗೆ ಅವರು ಖೇದವನ್ನು ವ್ಯಕ್ತಪಡಿಸಿದರು.

ಕಾವಲುಗಳ ಸುತ್ತಮುತ್ತಲು ವಾಸಿಸುವ ಜನರಿಗೆ, ಅಭಿವೃದ್ಧಿಯೆಂದರೆ ಐಐಎಸ್‌ಸಿ, ಡಿಆರ್‌ಡಿಓ, ಇತ್ಯಾದಿಗಳು ಅಲ್ಲಿ ಸ್ಥಾಪನೆಯಾಗಿ, ಅಲ್ಲಿ ಬೇರೆ ವಿಧಿ ಇಲ್ಲದೆ ಕ್ಲೀನರ್‌ಗಳು, ವಾಹನ ಚಾಲಕರು ಹಾಗೂ ಸುರಕ್ಷತ ಸಿಬ್ಬಂದಿಯಾಗಿ ಕೆಲಸ ಮಾಡುವುದಲ್ಲವೆಂದೂ, ತಮ್ಮ ಅಭಿವೃದ್ಧಿಯ ಪರಿಧಿಯು ತಮ್ಮದೇ ಜಾನುವಾರುಗಳನ್ನು ಬೆಳೆಸಿ, ನೋಡಿಕೊಂಡು, ಯಾರ ಮೇಲೂ ಅವಲಂಬಿತವಾಗದೆ, ಗೌರವಯುತವಾಗಿ ತಮ್ಮ ಆದಾಯವನ್ನು ತಾವೇ ಸಂಪಾದಿಸುವುದು ಅಗಿದೆಯೆಂದು ಜನರ ಅಭಿಪ್ರಾಯವೆಂದು ಈ ಅಹವಾಲುಗಳಿಂದ ವ್ಯಕ್ತವಾಯಿತು. ಕುರಿ ಸಾಕಣೆಯು ತಮ್ಮ ಕುಟುಂಬಕ್ಕೆ ಬಹಳಷ್ಟು ಉಪಯುಕ್ತವಾಗಿರುವುದನ್ನು ಕುರಿತಾಗಿ ಖುದಾಪುರದ ದಾಸರ ಬೋರಯ್ಯ ತಿಳಿಸಿದರು. ಬಡ ಸಣ್ಣ ರೈತರ ಮಗನಾಗಿ, ಅವರು ಅನಕ್ಷರಸ್ಥರಾಗಿದ್ದು, ತಮ್ಮ ಸಣ್ಣ ವಯಸ್ಸಿನಿಂದಲೂ ಕುರಿ ಸಾಕಣೆಯಲ್ಲಿ ತೊಡಗಿರುವುದನ್ನು ತಿಳಿಸಿದರು. ಆತನಿಗೆ ಏಳು ಹೆಣ್ಣುಮಕ್ಕಳಿದ್ದು, ಕೇವಲ ಕುರಿ ಸಾಕಣೆ ಒಂದರಿಂದಲೇ ಬಿ.ಎ.ವರೆಗೂ ಎಲ್ಲರಿಗೂ ವಿದ್ಯಾಭ್ಯಾಸ ಕೊಡಿಸಿರುವುದನ್ನು ತಿಳಿಸಿದರು.

ಹುಲ್ಲುಗಾವಲುಗಳ ಸುತ್ತ ಈ ಭೂಭಾಗದ ಸ್ಥಾನೀಯ ಸಂಸ್ಕೃತಿಯು ಬೆಳೆದಿರುವುದು ಹಾಗೂ ಇದರಿಂದ ಬೇರ್ಪಡೆ ಮಾಡಿದಲ್ಲಿ, ಇಡೀ ಜೀವನದ ವಿಧಾನವೇ ನಾಶವಾಗುವ ಸಂಗತಿಯನ್ನು ಎಲ್ಲ ಸ್ಥಳಗಳಲ್ಲೂ ಒತ್ತಿ ಹೇಳಲಾಯಿತು.

**ಕಾವಲುಗಳ ಕಾನೂನುಬಾಹಿರ, ಏಕರೀತಿಯ ಮಾರ್ಗಾಂತರಣದ ಬಗ್ಗೆ ಕ್ರೋಧ**

ವಿವಿಧ ಭಾಷಣಕಾರರು, ಮಾರ್ಗಾಂತರಣದ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಮುನ್ನ ಒಂದೇ ಗ್ರಾಮ ಸಭೆಯನ್ನಾಗಲಿ ಅಥವಾ ಒಂದು ಗ್ರಾಮ ಪಂಚಾಯತಿ ಸದಸ್ಯರ ಅಭಿಪ್ರಾಯವನ್ನು ಪಡೆದಿರುವುದಾಗಲೀ ಮಾಡಿಲ್ಲವೆಂದು ತಿಳಿಸಿದರು. ಯೋಜನೆಯನ್ನು ಪ್ರಾರಂಭಿಸಿದಾಗ, ಯೋಜನೆಯ ಪ್ರತಿಪಾದಕರು ಹಾಗೂ ಇತರ ಅಧಿಕಾರಿಗಳು, ಈ ಯೋಜನೆಯಿಂದ ಅನೇಕ ಜನರಿಗೆ ನೌಕರಿ ದೊರೆಯುವುದೆಂದೂ ತಪ್ಪಾಗಿ ನಂಬಿಸಿರುವ ಹಾಗೂ ಕಾವಲುಗಳ ಲಭ್ಯತೆಗೆ ಕಡಿವಾಣ ಹಾಕುವುದರ ಬಗ್ಗೆ ತಿಳಿಸಿರಲಿಲ್ಲವೆಂದು ಹೇಳಿದರು. ಗ್ರಾಮ ಪಂಚಾಯತಿಯ ಸದಸ್ಯರಲ್ಲಿ ಒಬ್ಬರಾದ ಓಬಯ್ಯನಹಟ್ಟಿಯ ಮರಿಪಾಲಯ್ಯವೆಂಬುವವರು 73ನೆಯ ಸಂವಿಧಾನ ತಿದ್ದುಪಡಿ ಹಾಗೂ ಅರಣ್ಯ ಹಕ್ಕು ಕಾಯಿದೆಗೆ ಈ ಮಾರ್ಗಾಂತರಣವು ವಿರೋಧವಾಗಿರುವುದರ ಸಂಗತಿಯನ್ನು ತಿಳಿಸಿದರು.

**ಮಾರ್ಗಾಂತರಣದ ಪ್ರಭಾವ**

ಕನಿಷ್ಠ 3 ಸ್ಥಳಗಳಲ್ಲಾದರೂ, ಕಾವಲುಗಳಲ್ಲಿ ಹುಲ್ಲು ಮೇಯಿಸಿದ್ದರಿಂದ ಪೋಲೀಸರು ತಮ್ಮನ್ನು ಯಾವ ರೀತಿ ಹೊಡೆದರು ಎಂದು ಜನರು ಹಂಚಿಕೊಂಡಿದ್ದಾರೆ. ಕಾವಲು ಗಳಲ್ಲಿ ಸರ್ಕಾರವು ಗೋಶಾಲೆಗಳನ್ನು ಹಾಗು ಗೋಕಟ್ಟೆಗಳ ವ್ಯವಸ್ತೆ ಮಾಡಿದ್ದರು, ಈಗ ಅವುಗಳಿಗು ಪ್ರವೇಶವಿಲ್ಲ. . ಕಾವಲುಗಳಿಗೆ ಲಭ್ಯತೆಯು ಕಡಿಮೆ ಆಗಿದ್ದರಿಂದ, ಜಾನುವಾರುಗಳ ವಿಪತ್ತು ಮಾರಾಟ ಹಾಗೂ ವಲಸೆ ಹೋಗುವ ಪ್ರಸಂಗಗಳು ನಡೆದಿವೆ. ಬರ ಕಾಲದಲ್ಲಿಯೂ ಜನ ಕಾವಲುಗಳಲ್ಲಿನ ಆಲೆ ಸೊಪ್ಪು, ಕಾರೆ ಸೊಪ್ಪು ಇತರೆ ಸೊಪ್ಪುಗಳನ್ನು ಆಹರಕ್ಕಗಿ ಉಪಯೋಗಿಸುತಿದ್ದರು, ಈಗ ಅದಕ್ಕೂ ಅವಕಾಶವಿಲ್ಲ. ಮೇವಿಲ್ಲದೆ, ನೀರಿಲ್ಲದೆ ಜನ ತಮ್ಮ ಜಾನುವಾರುಗಳನ್ನು ಮಾರಿಕೊಳ್ಳುತ್ತಾ ವಲಸೆ ಹೋಗಲು ಪ್ರಾರಂಬಿಸಿದ್ದಾರೆ.

ಬುಟ್ಟಿಗಳನ್ನು ಮಾಡಲು ಕಾವಲುಗಳ ಈಚಲು ಮರಗಳು ಈಗ ಲಭ್ಯವಾಗಿರದೆ ಇರುವುದರಿಂದ, ಲಂಬಾಣಿ ಸಮುದಾಯದ ಸದಸ್ಯರು ತಾವು ಆಂಧ್ರ ಪ್ರದೇಶಕ್ಕೆ ಕಚ್ಚಾ ವಸ್ತುಗಳನ್ನು ಪಡೆಯಲು ಹೋಗಬೇಕಾದುದನ್ನು ತಿಳಿಸಿದರು. ಒಂದು ಮೀಟರ್‌ನಷ್ಟು ಅಗಲ ಹಾಗೂ 1000 ಅಡಿ ಆಳವಿರುವ ಕೊಳವೆ ಬಾವಿಗಳನ್ನು ಡಿಆರ್‌ಡಿಓ ಹಾಗೂ ಇತರ ಸಂಸ್ಥೆಗಳು ಅಗೆದಿರುವುದರ ಬಗ್ಗೆ ಅಲ್ಲಿನ ನಿವಾಸಿಗಳು ಕಳಕಳಿಯನ್ನು ವ್ಯಕ್ತಪಡಿಸಿದರು. ತೊರಗಳಿಗೆ ತಡೆ ಹಾಕಿರುವುದು, ಸಣ್ಣ ಕೆರೆಗಳನ್ನು ಮುಚ್ಚಿರುವುದು, ಹಾಗೂ ಆ ಪ್ರದೇಶದಲ್ಲಿ ಕಾಂಕ್ರೀಟ್‌ನ್ನು ಸುರಿದಿರುವುದರಿಂದ ನೀರು ಭೂಮಿಗೆ ಇಳಿಯುವುದು ಕಡಿಮೆ ಆಗಿ, ಆ ಪ್ರದೇಶದ ಅಂತರ್ಜಲ ಮಟ್ಟವೂ ಇಳಿದಿದೆಯೆಂದು ಜನರು ದೂಷಿಸಿದರು.

ಕಾಲುವೆಹಳ್ಳಿಯ ಭೂತಯ್ಯ ಎಂಬ ರೈತರು, ಅಲ್ಲಿನ ವನ್ಯಜೀವಿಗಳ ಮೇಲೆ ಅಲ್ಲಿ ಸ್ಥಾಪನೆಗೊಂಡ ಈ ಸಂಸ್ಥೆಗಳು ಆಘಾತಕಾರಿ ಪರಿಣಾಮ ಬೀರಿರುವುದನ್ನು ಕುರಿತಾಗಿ ಮಾತನಾಡಿದರು. ಗೋಡೆಗಳು, ತಂತಿಬೇಲಿ, ಆಳವಾದ ಕೊಳವೆಬಾವಿಗಳ ಕೊರೆಯುವಿಕೆಯಿಂದ ಉಂಟಾದ ಶಬ್ದ ಹಾಗೂ ಡಿಆರ್‌ಡಿಓ ಸಿಡಿಸಿದ ಬಾಂಬ್‌ಗಳಿಂದ, ಹಲವಾರು ನವಿಲುಗಳು, ಕೃಷ್ಣ ಮೃಗಗಳು ಹಾಗೂ ಮೊಲಗಲು ಮರಣಿಸಿವೆ. ರೈತ ಸಂಘದ ರೈತ ನಾಯಕರೂ, ಕಾವಲಿನಲ್ಲಿ ಸ್ಥಾಪನೆಗೆ ಸಿದ್ಧವಿರುವ ಯುರೇನಿಯಂ ಎನ್‌ರಿಚ್‌ಮೆಂಟ್ ಸ್ಥಾವರವನ್ನು ಕುರಿತಾಗಿ ಕಳವಳ ವ್ಯಕ್ತಪಡಿಸಿದರು.

ಕಾವಲುಗಳನ್ನು ಅವರಿಂದ ಕಸಿದುಕೊಂಡಲ್ಲಿ, 60 ಗ್ರಾಮಗಳ ಜನರು ಸಾವನ್ನು ಎದುರಿಸಬೇಕಾದುದರ ಬಗ್ಗೆ ಅನೇಕ ಭಾಷಣಕಾರರು ಮಾತನಾಡಿದರು. ತಕ್ಷಣ ಹಾಗೂ ಆಳವಾದ ಕಳಕಳಿಯಿಂದ ಗಮನಿಸಬೇಕಾದ ಅಂಶವೆಂದರೆ, ಹಲವಾರು ಗ್ರಾಮಗಳ ಜನರು, ತಮ್ಮಿಂದ ಖಾಯಂ ಆಗಿ ಕಾವಲುಗಳನ್ನು ಕಸಿದುಕೊಂಡಲ್ಲಿ, ಅವರು ಸಮೂಹವಾಗಿ ವಿಷ ಸೇವಿಸಬೇಕಾಗುವುದೆಂದು ತಿಳಿಸಿದರು.

**ನಿವಾಸಿಗಳಿಗೆ ಎಮ್‌ಎಲ್‌ಎ ನೆರವು**

ತಮ್ಮ ಚುನಾವಣಾ ಕ್ಷೇತ್ರದಲ್ಲಿ ಬರುವ ಎಲ್ಲ ಕಾವಲುಗಳು ಹಾಗೂ ಬಹುಪಾಲು ಎಲ್ಲ ಗ್ರಾಮಗಳು ಇರುವ ಮೊಳಕಾಲ್ಮೂರು ಎಮ್‌ಎಲ್‌ಎ ಸಹ ಮೂರು ಅಹವಾಲುಗಳಲ್ಲಿ ಭಾಗವಹಿಸಿ ಸಮಿತಿಗೆ ಅರ್ಜಿ ಸಲ್ಲಿಸಿ, ಅದನ್ನು ಎನ್‌ಜಿಟಿಗೆ ನೀಡಲು ತಿಳಿಸಿದರು. ಅವರು ಅಲ್ಲಿನ ನಿವಾಸಿಗಳ ಕಳಕಳಿಗೆ ಧ್ವನಿಗೂಡಿಸಿ, ಕಾವಲುಗಳ ಮಾರ್ಗಾಂತರಣದಿಂದ ಅವರು ಎದುರಿಸುತ್ತಿರುವ ಅಪಾರವಾದ ಕಷ್ಟನಷ್ಟಗಳನ್ನು ಕುರಿತಾಗಿ ಮಾತನಾಡಿ, ಕಾವಲುಗಳ ಮೇಲಿನ ಸ್ಥಳೀಯ ಸಂಸ್ಥೆಗಳ ಹಕ್ಕು, ಹಾಗೂ ಯಾವುದೇ ಸಂದರ್ಭದಲ್ಲೂ ಅದನ್ನು ಸಂರಕ್ಷಿಸಬೇಕಾದ ಅಗತ್ಯವನ್ನು ಕುರಿತಾಗಿಯೂ ತಿಳಿಸಿದರು.

ಇಲ್ಲಿನ ಜನಜೀವನವು ಕಾವಲುಗಳ ಸುತ್ತಲೂ ಬೆಸೆದಿರುವ ಹಾಗೂ ಈ ಕಾವಲುಗಳ ಮಾರ್ಗಾಂತರಣದಿಂದ ಜನಜೀವನ ಹಾಗೂ ಈ ಪ್ರದೇಶದ ಸ್ಥಳೀಯ ಜೀವನಶೈಲಿಯ ಮೇಲೆ ಉಂಟಾಗುವ ಗಾಢವಾದ ಪರಿಣಾಮ ಉಂಟಾಗುವನ್ನು ಕುರಿತಾಗಿ ಸಾರ್ವಜನಿಕ ಅಹವಾಲುಗಳು ಪ್ರತಿಬಿಂಬಿಸಿವೆ. ಈ ವಿಷಯದ ಬಗೆಗಿನ ಹಲವಾರು ಕಳಕಳಿಗಳನ್ನು ಕುರಿತಾಗಿ ಎನ್‌ಜಿಟಿಯು ಗಣನೆಗೆ ತೆಗೆದುಕೊಂಡು, ಜನರಿಗೆ ನ್ಯಾಯ ಒದಗಿಸುವುದೆಂದು ಆಶಿಸುತ್ತೇವೆ.

**ಲಿಯೋ ಎಫ್ಞ್ ಸಾಲ್ಡಾನ,**

ಸಂಯೋಜಕರು, ಇಎಸ್‌ಜಿ;

ಈಮೇಲ್: leo@esgindia.org

ದೂರವಾಣಿ: 9448377403 ; http://esgindia.org

**ವಿನಯ್. ಕೆ. ಶ್ರೀನಿವಾಸ;**

ಈಮೇಲ್: , vinay.sreenivasa@yahoo.com

ದೂರವಾಣಿ: 9880595032